# ಭಾಷೆ, ಸಮಾಜ ಮತ್ತು ಸಂಸ್ಕೃತಿ.

**ಡಾ. ನಾಗರಾಜ ವೀ. ಬಳಿಗೇರ**

ಸಹಾಯಕ ಪ್ರಾಧ್ಯಾಪಕರು

ಕೆ.ಎಲ್.ಇ. ಸಂಸ್ಥೆಯ ಜೆ. ಟಿ. ಮಹಾವಿದ್ಯಾಲಯ

ಗದಗ.

**Article Link: https://aksharasurya.com/2023/08/nagaraj-v-baliger/**

**ABSTRACT:**

ಭಾಷೆಯನ್ನು ಕುರಿತು ಭಾಷಾ ವಿಜ್ಞಾನಿಗಳು, ಸಮಾಜವನ್ನು ಕುರಿತು ಸಮಾಜ ವಿಜ್ಞಾನಿಗಳು, ಸಂಸ್ಕೃತಿಯನ್ನು ಕುರಿತು ಮಾನವಶಾಸ್ತ್ರಜ್ಞರು ಶಾಸ್ತ್ರೀಯವಾಗಿ ಅಧ್ಯಯನ ನೆಡೆಸಿ ವಿಶ್ಲೇಷಣೆ ಮಾಡಿದ್ದರೂ, ಈ ಶಿಸ್ತುಗಳ ಅಧ್ಯಯನ ವಿಷಯ ಈ ವಿಶ್ಲೇಷಕರ ಅಧ್ಯಯನದ ಗಡಿಗಳನ್ನು ದಾಟಿ ಚಾಚಿಕೊಂಡಿರುವುದು, ಏಕಕಾಲಕ್ಕೆ ಅಧ್ಯಯನಗಳ ಮಿತಿಯನ್ನು, ವಿಷಯದ ಘನತೆಯನ್ನು ಎತ್ತಿ ತೋರಿಸುತ್ತಿದೆ. ಹಲವಷ್ಟು ಸಮಸ್ಯೆಗಳಿಗೆ ತಮ್ಮ ತಮ್ಮ ನೆಲೆಯಲ್ಲಿ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲರಾದ ಈ ತಜ್ಞರು ತಮ್ಮ ನೆರವಿಗಾಗಿ ಇತರ ಶಿಸ್ತುಗಳತ್ತ ಕೈಚಾಚಿ ನಿಂತದ್ದು ಗಮನಾರ್ಹ ಸಂಗತಿ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಅಂತಃಶಿಸ್ತೀಯ ಅಧ್ಯಯನಗಳಿಗೆ ಹೆಚ್ಚಿನ ಮನ್ನಣೆ ಪ್ರಾಪ್ತವಾಗುತ್ತದೆ. ಕೆಲವು ವಿದ್ವಾಂಸರು ಏಕಕಾಲದಲ್ಲಿ ಅನೇಕ ವಿಷಯಗಳ ಪರಿಣಿತಿ ಸಂಪಾದಿಸಿ ಭಾಷೆ, ಸಂಸ್ಕೃತಿ, ಸಮಾಜದ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಿದ್ದಾರೆ. ಭಾಷೆ, ಸಮಾಜ, ಸಂಸ್ಕೃತಿಗಳು ಒಂದಕ್ಕೊಂದು ಆಂತರಿಕ ಸಂಬಂಧಗಳನ್ನು ಹೊಂದಿರುವಂತವು. ಭಾಷೆ ಸಮಾಜದ ಕೂಸು ಸಂಸ್ಕೃತಿಯು ಸಮಾಜದ ಸ್ವಾಸ್ಥವನ್ನು ಕಾಪಾಡುವಂತದ್ದು. Society is a web of social relationship it is knitted through language ಎನ್ನುವ ಮಾತಿದೆ. ಸಮಾಜ ಮಾನವ ಸಂಬಂಧಗಳ ಹೆಣಿಕೆಯಾದ ಆದರೆ ಅದನ್ನು ಹೆಣೆದ ಮಾಂತ್ರಿಕ ಶಕ್ತಿ ಭಾಷೆ ಎನ್ನುತ್ತಾರೆ. ಸಮಾಜಶಾಸ್ತ್ರಜ್ಞರು What people do and think is their culture language is the replica of culture ಎಂಬ ಸಂಸ್ಕೃತಿಯನ್ನು ಕುರಿತ ಸರಳ ವಿವರಣೆಯಲ್ಲಿ ಜನರ ದೈಹಿಕ ಹಾಗೂ ಮಾನಸಿಕ ಚಟುವಟಿಕೆಗಳೇ ಅವರ ಸಂಸ್ಕೃತಿ ಅದು ಭಾಷೆಯಲ್ಲಿ ಪ್ರತ್ರೀಕಗೊಳ್ಳುತ್ತದೆ. ಮೂರೂ ಒಂದರೊಡನೊಂದು ಅವಿನಾಸಂಬಂಧವನ್ನು ಹೆಣೆದುಕೊಂಡಿವೆ. ಒಂದನ್ನುಳಿದು ಇನ್ನೊಂದಕ್ಕೆ ಅಸ್ತಿತ್ವ ಪ್ರಾಪ್ತವಾಗುವುದಿಲ್ಲ. ಒಂದನ್ನು ಬಿಟ್ಟು ಇನ್ನೊಂದನ್ನು ಪರಿಗಣಿಸಲು ಬರುವುದಿಲ್ಲ. ಆದುದರಿಂದ ಭಾಷೆ ಪ್ರತ್ಯೇಕವಾಗಿ ಅಧ್ಯಯನ ಮಾಡಲಾಗುವುದಿಲ್ಲ. ಹಾಗೇ ಸಮಾಜ ಮತ್ತು ಸಂಸ್ಕೃತಿ.

**KEYWORDS:** ಸಮಾಜ, ಸಂಸ್ಕೃತಿ, ಭಾಷೆ, ಜಿಜ್ಞಾಸೆ, ಬದಲಾಣೆ.

ಭಾಷೆಯನ್ನು ಕುರಿತು ಭಾಷಾ ವಿಜ್ಞಾನಿಗಳು, ಸಮಾಜವನ್ನು ಕುರಿತು ಸಮಾಜ ವಿಜ್ಞಾನಿಗಳು, ಸಂಸ್ಕೃತಿಯನ್ನು ಕುರಿತು ಮಾನವಶಾಸ್ತ್ರಜ್ಞರು ಶಾಸ್ತ್ರೀಯವಾಗಿ ಅಧ್ಯಯನ ನೆಡೆಸಿ ವಿಶ್ಲೇಷಣೆ ಮಾಡಿದ್ದರೂ, ಈ ಶಿಸ್ತುಗಳ ಅಧ್ಯಯನ ವಿಷಯ ಈ ವಿಶ್ಲೇಷಕರ ಅಧ್ಯಯನದ ಗಡಿಗಳನ್ನು ದಾಟಿ ಚಾಚಿಕೊಂಡಿರುವುದು ಏಕಕಾಲಕ್ಕೆ ಅಧ್ಯಯನಗಳ ಮಿತಿಯನ್ನು ವಿಷಯದ ಘನತೆಯನ್ನು ಎತ್ತಿ ತೋರಿಸುತ್ತಿದೆ. ಹಲವಷ್ಟು ಸಮಸ್ಯೆಗಳಿಗೆ ತಮ್ಮ ತಮ್ಮ ನೆಲೆಯಲ್ಲಿ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲರಾದ ಈ ತಜ್ಞರು ತಮ್ಮ ನೆರವಿಗಾಗಿ ಇತರ ಶಿಸ್ತುಗಳತ್ತ ಕೈಚಾಚಿ ನಿಂತದ್ದು ಗಮನಾರ್ಹ ಸಂಗತಿ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಅಂತಃಶಿಸ್ತೀಯ ಅಧ್ಯಯನಗಳಿಗೆ ಹೆಚ್ಚಿನ ಮನ್ನಣೆ ಪ್ರಾಪ್ತವಾಗುತ್ತದೆ. ಕೆಲವು ವಿದ್ವಾಂಸರು ಏಕಕಾಲದಲ್ಲಿ ಅನೇಕ ವಿಷಯಗಳ ಪರಿಣಿತಿ ಸಂಪಾದಿಸಿ ಪ್ರಸ್ತುತದ ಭಾಷೆ ಸಂಸ್ಕೃತಿ ಸಮಾಜದ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಿದ್ದಾರೆ. 1952 ರಿಂದ ಇತ್ತೀಚಿಗೆ ಭಾಷಾವಿಜ್ಞಾನದಿಂದ ಹೊರಹೊಮ್ಮಿದ ಸಾಮಾಜಿಕ ಭಾಷಾವಿಜ್ಞಾನ ಸಮಾಜ ಸಂಸ್ಕೃತಿ ಮತ್ತು ಭಾಷಾ ಸಂಬಂಧಿ ವಿಷಯಗಳನ್ನು ತನ್ನ ಅಧ್ಯಯನದ ವಸ್ತುವನ್ನಾಗಿಸಿಕೊಂಡಿವೆ. ಭಾಷೆಯೊಂದೇ ಉತ್ತರಿಸಲಾಗದ, ಸಮಾಜವೊಂದೇ ನಿರ್ಧರಿಸಲಾಗದ, ಸಂಸ್ಕೃತಿಯೊಂದೇ ವಿವರಿಸಲಾಗದ ಆದರೆ ಈ ಮೂರೂ ನೆಲೆಗಳಲ್ಲಿ ಹರಡಿಕೊಂಡಿರುವ ಸಮಸ್ಯೆಗಳಿಗೆ ಸಾಮಾಜಿಕ ಭಾಷಾವಿಜ್ಞಾನ ಸೂಕ್ತ ಉತ್ತರ ನೀಡಬಲ್ಲದು. Language is the system of arbitrary Vocal symbols by means of which a social group co-operates ಎನ್ನುವ ಬ್ಲಾಕ್ ಮತ್ತು ಟ್ರಾಗರ್ ವ್ಯಾಖ್ಯೆಯಾಗಲಿ Language is a social fact ಎಂಬ ಸಸ್ಸೂರನ ಮಾತಾಗಲಿ ಈ Language is not only an element of culture it is the basis for all culture activities ಎಂಬಂತಹ ಕ್ರೋಬರ್‌ನ ಹೇಳಿಕೆಯಾಗಲಿ ಭಾಷೆ, ಸಮಾಜ ಮತ್ತು ಸಂಸ್ಕೃತಿಯೊಡನೆ ಇಟ್ಟುಕೊಂಡಿರುವ ನಿಕಟ ಸಂಬಂಧವನ್ನು ಸಾರಿ ಸಾರಿ ಹೇಳುತ್ತಿವೆ

Society is a web of social relationship it is knitted through language ಎನ್ನುವ ಮಾತಿದೆ. ಸಮಾಜ ಮಾನವ ಸಂಬಂಧಗಳ ಹೆಣಿಕೆಯಾದ ಆದರೆ ಅದನ್ನು ಹೆಣೆದ ಮಾಂತ್ರಿಕ ಶಕ್ತಿ ಭಾಷೆ ಎನ್ನುತ್ತಾರೆ. ಸಮಾಜಶಾಸ್ತ್ರಜ್ಞರು what people do and think is their culture language is the replica of culture ಎಂಬ ಸಂಸ್ಕೃತಿಯನ್ನ ಕುರಿತ ಸರಳ ವಿವರಣೆಯಲ್ಲಿ ಜನರ ದೈಹಿಕ ಹಾಗೂ ಮಾನಸಿಕ ಚಟುವಟಿಕೆಗಳೇ ಅವರ ಸಂಸ್ಕೃತಿ ಅದು ಭಾಷೆಯಲ್ಲಿ ಪ್ರತ್ರೀಕಗೊಳ್ಳುತ್ತದೆ

ಎಂಬ ಅಂಶ ಸ್ಪಷ್ಟವಿದೆ. ಹೀಗೆ ವ್ಯಾಖ್ಯಾನ ಅಥವಾ ವಿವರಣೆ ಭಾಷೆಯದೇ ಇರಲಿ, ಸಮಾಜದ್ದೇ ಇರಲಿ ಅಥವಾ ಸಂಸ್ಕೃತಿಯದ್ದೇ ಇರಲಿ, ಅದರಲ್ಲಿ ಇವು ಮೂರಕ್ಕೂ ಸಮಪಾಲು ಇರುವುದನ್ನು ಮೇಲಿನ ಉದ್ಧೃತ ಹೇಳಿಕೆಗಳು ಖಚಿತಪಡಿಸಿವೆ. ಭಾಷೆಯನ್ನು ಬಿಟ್ಟು ಸಮಾಜ, ಸಮಾಜವನ್ನು ಬಿಟ್ಟು ಸಂಸ್ಕೃತಿ, ಇವೆರಡನ್ನೂ ಬಿಟ್ಟು ಭಾಷೆಯನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಯಾವಾಗಲೂ ಇವು ಒಂದರ ಜೊತೆಗೆ ಇನ್ನೊಂದು ತಳುಕು ಹಾಕಿಕೊಂಡೇ ಉಳಿಯುವಂಥವು ಬೆಳೆಯುವಂಥವು ಮತ್ತು ಇವುಗಳು ಸಂಬಂಧದ ನೆಲಗಣ್ಣುಗಳಾಗಿರುತ್ತವೆ. ಒಂದು ಪದದಲ್ಲಿ ಅಭಿವ್ಯಕ್ತವಾಗುವ ಈ ಸಂಬಂಧ ಎರಡೂ ಪದಗಳಲ್ಲಿ ಅಥವಾ ಪದಪುಂಜದಲ್ಲಿ ವ್ಯಕ್ತವಾದರೆ, ಅದು ಸಮಾಜದಲ್ಲಿ ಬಂಧುತ್ವದ ಬಿರುಕನ್ನು ಪ್ರತಿಫಲಿಸುತ್ತದೆ. ಕನ್ನಡದ ಅತ್ತೆ, ಮಾವ, ಭಾವ, ಅಣ್ಣ, ಅಕ್ಕ ಇತ್ಯಾದಿ ಪದಗಳಿಗೆ ಇಂಗ್ಲಿಷ್ ನ Mother in law, Father in law, Brother in law. Elder brother, Elder sister ಇತ್ಯಾದಿ ಸಂಬಂಧ ಸೂಚಿ ಪದಗಳನ್ನು ಹೋಲಿಸಿ ನೋಡಿದಾಗ ಆಯಾ ಸಮಾಜದಲ್ಲಿ ಇರುವ ಸಂಬಂಧಗಳ ಆರ್ಥಿಕತೆ ಮನದಟ್ಟಾಗುತ್ತದೆ. ಅಳಿಯ ಅಲ್ಲ ಮಗಳ ಗಂಡ ಇದೊಂದು ಕನ್ನಡದ ರೂಢಿಮಾತು. ಅಳಿಯ ಅಂದರೂ ಒಂದೇ ಮಗಳ ಗಂಡ ಅಂದರೂ ಒಂದೇ ಎಂಬುದು ಇಲ್ಲಿನ ಮೇಲ್ನೋಟದ ಅರ್ಥ. ಆದರೆ ಹೆಣ್ಣು ಕೊಟ್ಟ ಅತ್ತೆ ಹಾಗೂ ಮಾವ ನೇರವಾಗಿ ಅಳಿಯ ಎಂದು ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಅಳಿಯನಾದವನು ಈಗ ಇಲ್ಲ. ಆತ ಅಷ್ಟರಮಟ್ಟಿಗೆ ಅವರ ಬೇಸರಕ್ಕೆ ಉದಾಸೀನಕ್ಕೆ ಆಕ್ರೋಶಕ್ಕೆ ತುತ್ತಾಗಿದ್ದಾರೆ. ಹೆಣ್ಣು ಕೊಟ್ಟ ಕಾರಣಕ್ಕಾಗಿ ಈಗ ಅನಿವಾರ್ಯವಾಗಿ ಅವರು ಅವನನ್ನು ಮಗಳ ಗಂಡ ಎಂದು ಹೇಳಬೇಕಾದ ಸ್ಥಿತಿಯಲ್ಲಿ ಇದ್ದಾರೆ. ಸಂಬಂಧಗಳು ಹದಗೆಟ್ಟ ಸೂಚನೆ ಈ ರೂಢಿಯ ಮಾತಿನಲ್ಲಿ ಧ್ವನಿಸಿದೆ ಎಂದು ಸಾಮಾಜಿಕ ಭಾಷಾ ವಿಜ್ಞಾನಿಗಳು ಅರ್ಥೈಸುತ್ತಾರೆ. ಸಮಾಜದ ಇಂಥ ಸೂಕ್ಷ್ಮ ವಿಚಾರಗಳನ್ನು ಭಾಷೆ ತನ್ನ ಗರ್ಭದಲ್ಲಿ ಅಡಗಿಸಿಕೊಂಡು ತನ್ನ ರಚನೆಯಲ್ಲಿ ಎರಕ ಹೊಯ್ಯುತ್ತದೆ. ಅದನ್ನು ಸಮರ್ಥವಾಗಿ ಸಾಮಾಜಿಕ ಭಾಷಾವಿಜ್ಞಾನ ಒರೆಹಚ್ಚಿ ನೋಡುತ್ತಿದೆ.

ಉಪ ಭಾಷಾವಿಜ್ಞಾನ ಕುಡಿಯೊಡೆಯುವವರೆಗೂ ಆಡುಮಾತಿಗೆ ಭಾಷೆಯ ಅಧ್ಯಯನದಲ್ಲಿ ಸ್ಥಾನ ಇರಲಿಲ್ಲ. ಹಿಂದಿನ ವಿದ್ವಾಂಸರಿಗೆ ಆಡುಮಾತು ನೀರ ಮೇಲಿನ ಗುಳ್ಳೆಯಂತೆ ನಶ್ವರ ಎಂಬ ಭಾವನೆಯಿತ್ತು. ಶಾಶ್ವತ ಎಂಬ ಭ್ರಮೆಯ ಅಕ್ಷರಸ್ಥ ಅಥವಾ ಗ್ರಂಥಸ್ಥ ಭಾಷೆಯ ಬಗೆಗೆ ಇದು ಬರಹದ ಭಾಷೆಯ ಅಧ್ಯಯನದಲ್ಲಿ ಮನ್ನಣೆ ಪ್ರಾಪ್ತವಾಗಿತ್ತು. ಹೀಗಾಗಿ ವಿದ್ಯಾವಂತರ ಓದು ಬರಹ ಬಲ್ಲವರ

ಸಾಮಾನ್ಯವಾಗಿ ಮೇಲ್ವರ್ಗದವರ ಭಾಷೆಗೆ ಮಾತ್ರ ಸವಲತ್ತು ಲಭ್ಯವಾಗಿತ್ತು. ಕಾವ್ಯ ಮೀಮಾಂಸೆ ವ್ಯಾಕರಣ ನಿಘಂಟುಗಳು ಬರಹದ ಭಾಷೆಯನ್ನು ಅವಲಂಬಿಸಿಯೇ ಸಿದ್ಧವಾದವು. ಮಾತು ಮೊದಲು ಬರಹ ಆಮೇಲೆ ಎನ್ನುವ ಸತ್ಯ ತಿಳಿದುಕೊಳ್ಳಲು ಶತಮಾನಗಳೆ ಉರುಳಿದವು. ಆಡು ನುಡಿಯ ನೆಲೆಗಟ್ಟುಗಳ ಮೇಲೆ ಭಾಷಾವಿಜ್ಞಾನ ಬೇರುಬಿಟ್ಟಿದೆ. ಆಡು ನುಡಿಯನ್ನು ಸಂರಕ್ಷಿಸುವ, ಸಂಗ್ರಹಿಸಿ ವಿಶ್ಲೇಷಿಸುವ ಸಾಮಗ್ರಿ ಸಲಕರಣೆಗಳು ತತ್ವ ವಿಧಾನಗಳು ಭಾಷಾವಿಜ್ಞಾನದಲ್ಲಿ ಆವಿಷ್ಕಾರಗೊಂಡವು. ಇದ–ರಿಂದಾಗಿ, ಭಾಷಾ ಅಧ್ಯಯನಗಳು, ಸಂಶೋಧನೆಗಳು, ಓದು ಬರಹ ಬಾರದ ಗ್ರಾಮೀಣ ಜನರದೆಡೆಗೆ, ಪರಿಶಿಷ್ಠ ಜಾತಿ, ಪಂಗಡ, ಬುಡಕಟ್ಟು ಜನರಕಡಗೆ ಸಾಗಿತು. ಅಲ್ಲಿಯವರೆಗೆ ಅವಜ್ಞಕೊಳಗಾಗಿದ್ದ, ಆಡುನುಡಿಯ ಲೋಕ ಭಾಷಾವಿಜ್ಞಾನಿಗಳ ಕಾರ್ಯಕ್ಷೇತ್ರವಾಯಿತು. ಎಲ್ಲಾ ಭಾಷಾವಿಜ್ಞಾನಿಗಳು ಈ ಕುರಿತು ಕಾರ್ಯಪ್ರವೃತರಾದರು.

ಉಪ ಭಾಷಾವಿಜ್ಞಾನ ಹೆಚ್ಚಾಗಿ ಪ್ರಾದೇಶಿಕ ನೆಲೆಯಲ್ಲಿ ವಿಜೃಂಬಿಸಿತು. ಸಾಮಾಜಿಕ ಉಪಭಾಷೆಗಳು, ಉಪಭಾಷೆಗಳೇ ಅಲ್ಲ ಎಂಬ ಅಜ್ಞಾನಿಗಳ ನಿಲುವೂ ವ್ಯಕ್ತವಾಗಿತ್ತು. ಆದರೆ ಬಹುಬೇಗ ಈ ದೋರಣೆ ಬದಲಾಯಿತು. ಸಾಮಾಜಿಕ ಉಪಭಾಷೆಗಳ ಮಹತ್ವ ಅರಿವಿಗೆ ಬಂದಿತು. ಈ ನಿಟ್ಟಿನಲ್ಲಿ ಪಾಶ್ಚಿಮಾತ್ಯರ ಗಮನವನ್ನು ಸೆಳಿಯಿತು. ಅಲ್ಲದೆ ಅವರ ಕೊಡುಗೆಗಳು ಕಣ್ಣುತೆರೆಯಿಸಿದವು. ಭಾಷೆಯ ಸಾಮಾಜಿಕ ಅಂಶಗಳನ್ನು ಕಲೆ ಹಾಕುವಲ್ಲಿ ವಕ್ತೃಗಳನ್ನು ಪ್ರತಿವಕ್ತರರು ಅಥವಾ ಭಾಷಾ ಸೂಚಕರನ್ನು ಬ್ರಾಹ್ಮಣ, ಅಬ್ರಾಹ್ಮಣ ಮತ್ತು ಶೂದ್ರ ಎಂಬ ತ್ರಿವಿಧ ವರ್ಗೀಕರಣಕ್ಕೆ ಒಳಪಡಿಸಲಾಯಿತು. ಜತೆಗೆ ಗ್ರಾಮಮುಖಿ ಅಧ್ಯಯನಗಳಿಗಿಂತ ಭಿನ್ನ ವಾದ ನಗರಗಳ ಭಾಷೆ ಕಡೆಗೂ ಒತ್ತು ಬಿತ್ತು. ಪ್ರಾದೇಶಿಕ ದೂರ ಮತ್ತು ಪ್ರತಿಬಂಧಕಗಳಿಗಿಂತ ಸಾಮಾಜಿಕ ದೂರ ಮತ್ತು ಪ್ರತಿಬಂಧಕಗಳು ಹೆಚ್ಚು ಪ್ರಸ್ತುತವಾದವು. ನಗರ ಭಾಷೆಯ ವೈವಿಧ್ಯತೆ ವಿವಿಧ ಸಾಮಾಜಿಕ ಪ್ರತಿಬಂಧಕಗಳನ್ನಾಧರಿಸಿ ಅನಾವರಣ ಗೊಳ್ಳಲು ತೊಡಗಿತು. ಸಮಾಜದ ಜಾತಿ ವರ್ಗಗಳಿಗೆ ಸರಿಸಾಟಿಯಾಗಿ ಲಿಂಗಭೇದ ಆರ್ಥಿಕ ಸ್ಥಿತಿಗತಿ ವಯಸ್ಸು ವಿದ್ಯೆ ಇತ್ಯಾದಿಗಳು ಸಂಶೋಧನೆಯ ದಿಕ್ಸೂಚಿಗಳಾದವು. ಭಾಷೆಯ ಸಾಮಾಜಿಕ ಪರಿಸರವನ್ನು ಗುರುತಿಸುವಲ್ಲಿ ನೆರವಾದವು. ಆಡುಗ, ಕೇಳುಗ ಮತ್ತು ಮಾತಿನ ಪರಿಸರ ಸಂಶೋಧನೆಯಲ್ಲಿ ಗಣನೀಯ ಫಲಿತಾಂಶ ನೀಡಿದವು. ಹೀಗೆ ಕೇವಲ ಗ್ರಂಥಸ್ಥ ಸಾಮಗ್ರಿಗೆ ಸೀಮಿತವಾಗಿದ್ದ ಭಾಷೆಯ ಅಧ್ಯಯನ ಇಂದು ತನ್ನ ಎಲ್ಲ ರಚನಾತ್ಮಕ ಚೌಕಟ್ಟಿನ ವ್ಯಾಪ್ತಿಯಲ್ಲಿ ಬಳಕೆಯ ಇತಿಮಿತಿಯಲ್ಲಿ ಸಾಂದರ್ಭಿಕ

ಪರಿಸರದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಬೀಳಲುಗಳೊಡನೆ ಬೆಸೆದುಕೊಂಡಿದೆ. Language is uniform homogenous and monolithic in nature ಎಂಬ ಸಂರಚನಾವಾದಿಗಳ ವಿಚಾರವನ್ನು ಭಾಷೆಯ Heterogenity ಯನ್ನು ತೋರಿಸಿಕೊಡುವ ಮೂಲಕ ಸಾಮಾಜಿಕ ಭಾಷಾ ವಿಜ್ಞಾನಿಗಳು ಪ್ರತಿ–ರೋಧಿಸಿದ್ದಾರೆ. ಏನೇ ಇರಲಿ There is no language without a grammar there is no society without a structure ಎಂಬ ಈ ಮಾತು ಹೆಚ್ಚು ಅರ್ಥಪೂರ್ಣವಾಗಿದೆ. ಧ್ವನಿ ಪದ ವಾಕ್ಯ ಅರ್ಥ ಎಂಬ ವ್ಯಾಕರಣಾತ್ಮಕ ರಚನೆ ಭಾಷೆಯಾಗಿದ್ದರೆ ಜಾತಿ, ಮತ, ಧರ್ಮ, ಲಿಂಗ ಕಾರಣವಾಗುತ್ತವೆ. ಲಿಂಗ ವರ್ಗ ಕಾನೂನು ಕಟ್ಟಳೆ ಮುಂತಾದ ರಚನೆ ಸಮಾಜಕ್ಕಿದೆ ಅಂದರೆ ಭಾಷೆಗೂ ರಚನೆಯಿದೆ ಸಮಾಜಕ್ಕೂ ರಚನೆಯಿದೆ ಹೀಗೆ ಇವೆರಡಕ್ಕೂ ರಚನೆಯೆನ್ನುವುದು ಇರುವುದ–ರಿಂದಲೇ ಇವೆರಡನ್ನು ಪರಸ್ಪರ ಸಹಸಂಬಂಧಿ ತತ್ವದ ಹಿನ್ನೆಲೆಯಲ್ಲಿ ಸಾಮಾಜಿಕ ಭಾಷಾ ವಿಜ್ಞಾನಿಗಳು ವಿಶ್ಲೇಷಿಸುವುದು ಸಾಧ್ಯವಾಗಿದೆ. ಸಾಮಾಜೀಕರಣ ಎಂದರೆ ಒಂದು ಬಗೆಯಲ್ಲಿ ಒಂದು ವಿಶಿಷ್ಟ ಸಾಂಸ್ಕೃತಿಕ ಅನನ್ಯತೆಯನ್ನು ಸಾಧಿಸುವುದು ಎಂದರ್ಥ ಈ ಸಾಮಾಜೀಕರಣ ಪ್ರತಿಕ್ರಿಯೆಯಲ್ಲಿ Biological individual is transformed into a specific cultural being ಈ ಪರಿವರ್ತನೆಯನ್ನು ತರುವಲ್ಲಿ ಅನೇಕ ಸಾಮಾಜಿಕ ಕಾರ್ಯಭಾರಿಗಳು ಕಾರಣವಾಗುತ್ತವೆ.

ಒಂದು ಕುಟುಂಬ ಈ ಕೆಲಸವನ್ನು ಮಾಡಬಹುದು ಸಹಪಾಠಿಗಳು ಒಡನಾಡಿಗಳು ಈ ಕೆಲಸ ಮಾಡಬಹುದು ಕಲಿಯುವ ಶಾಲೆ ಇದನ್ನು ಮಾಡಬಹುದು ಅಥವಾ ದುಡಿಮೆಯ ಪರಿಸರ ಸಾಮಾಜಿಕರಣಕ್ಕೆ ಒಳಗುಮಾಡಬಹುದು ಒಟ್ಟಿನಲ್ಲಿ ಸಾಮಾಜೀಕರಣ ಪ್ರಕ್ರಿಯೆಯ ಪರಿಪೂರ್ಣ ನಾಲ್ಕು ಸಾಂದರ್ಭಿಕ ಒತ್ತಡಗಳು ಕೆಲಸ ನಿರ್ವಹಿಸುತ್ತವೆ. ಅವಾವುವೆಂದರೆ ನಿಬರ್ಂಧಾತ್ಮಕ ಪರಿಸರ, ಬೋಧನಾತ್ಮಕ ಪರಿಸರ, ಪ್ರಚೋದನಾತ್ಮಕ ಪರಿಸರ ಮತ್ತು ಅಂತ್ಯ ವ್ಯಕ್ತಿಯ ಪರಿಸರ. ಸಾಮಾಜೀಕರಣ ಭಾಷಾ ಸಂಸ್ಕೃತಿಯ ಅನನ್ಯತೆಯ ಹಿನ್ನಲೆಯಲ್ಲಿ ಪರಿಗಣಿಸಲೇ ಬೇಕಾದ ಬಹುಮುಖ್ಯ ಅಂಶ

ಸಾಮಾಜಿಕ ಏನಂತ ದೃಷ್ಟಿಕೋನದಿಂದ ಭಾಷೆಯನ್ನ ನೋಡುವಾಗ ಅದರಲ್ಲಿ ಎರಡು ಪ್ರಮುಖ ನೆಲೆಗಳು ಗೋಚರಿಸುತ್ತವೆ.

1. ಸಾಮಾಜಿಕ ಸಂಬಂಧಗಳನ್ನು ಬೆಸೆಯುವಲ್ಲಿ ಭಾಷೆ ನಿರ್ವಹಿಸುವ ಕಾರ್ಯ.
2. ಆಡುಗನ ಮಾಹಿತಿಯನ್ನು ಒದಗಿಸುವಲ್ಲಿ ಭಾಷೆ ವಹಿಸುವ ಪಾತ್ರ.

ಒಬ್ಬ ವ್ಯಕ್ತಿ ಮಾತಾಡಲು ಬಾಯಿ ತೆರೆದ ತಕ್ಷಣ ನಮಗೆ ಅವನ ಅನೇಕ

ಮಾಹಿತಿ ಲಭ್ಯವಾಗಿ ಬಿಡುತ್ತದೆ. ಅವನ ಭಾಷೆ, ಅದನ ಪ್ರಾದೇಶಿಕ ಹಿನ್ನೆಲೆ, ಸಾಮಾಜಿಕ ಹಿನ್ನೆಲೆ, ವ್ಯಕ್ತಿಯ ಶೈಕ್ಷಣಿಕ ಆರ್ಥಿಕ ಸಾಮಾಜಿಕ ಸ್ಥಾನಮಾನಗಳ ಸುಳಿವು ಕೂಡ ದೊರೆಯಲು ಸಾಧ್ಯ. ಅಂತೆಯೇ ಭಾಷಾ ಬಾಂಧವ್ಯ ವ್ಯಕ್ತಿ ವ್ಯಕ್ತಿಗಳನ್ನು ಬೆಸೆಯುವ ಸಾಧನ ಕೂಡ ಆಗಬಹುದು. ಕನ್ನಡಿಗ ಎನ್ನುವ ಒಂದು ಭಾವನಾತ್ಮಕ ಸಂಬಂಧ ಅನೇಕ ವೈಯಕ್ತಿಕ ನೆಲೆಯ ಪರಿಮಿತಿಗಳನ್ನು ಮೀರಿ ಒಟ್ಟುಗೂಡಿಸಬಹುದು. ಇದು ಭಾಷೆಗಿರುವ ಅಪರಿಮಿತ ಶಕ್ತಿ.

ಭಾಷೆಯಲ್ಲಿ ಉಚ್ಚನೀಚ ಶಿಷ್ಟ ಎನ್ನುವ ಮಾತಿಲ್ಲ. ಈ ಭೇದಕ್ಕೆ ಕಾರಣ ಸಮಾಜವೇ ಹೊರತು ಭಾಷೆಯಲ್ಲ. ಜನರಿಂದ ಬಳಕೆಯಾಗುವ ಎಲ್ಲ ಭಾಷೆಗಳು ಅವುಗಳ ಪ್ರಭೇದಗಳು ಭಾಷಾವಿಜ್ಞಾನಿಗಳ ದೃಷ್ಟಿಯಲ್ಲಿ ಸಮಾನ ಗೌರವ ಸಲ್ಲಿಸುವ ಆದರೆ ಅವುಗಳ ನಡುವೆ ಏರ್ಪಡುವ ಕಂದರ ಮಾತ್ರ ಸಾಮಾಜಿಕ ನಿರ್ಣಯಗಳಿಂದ ನಿರ್ಮಾಣವಾದುದು. ಉದಾಹರಣೆಗೆ ಇಂಗ್ಲಿಷ್ ವರ್ಣದ ಉಚ್ಚಾರಣೆ ಇಂಗ್ಲೆಂಡಿನಲ್ಲಿ ಶಿಷ್ಟವಲ್ಲದ್ದು. ಆದರೆ ಅದೇ ಅಮೇರಿಕಾದಲ್ಲಿ ಬಳಸುವ ಇಂಗ್ಲಿಷ್ ಉಚ್ಚಾರಣೆಯಲ್ಲಿ ಶ್ರೇಷ್ಠವಾದದ್ದು. ಈ ಭೇದ ಭಾಷೆಯ ನ್ಯೂನ್ಯತೆಯಿಂದ ಬಂದದ್ದಲ್ಲ. ಸಮಾಜದ ಧೋರಣೆಯಿಂದ ಉಂಟಾದದ್ದು. ಈ ಸತ್ಯ Value judgments concerning the Correctness and purity of linguistic Varieties are social rather than linguistic ಎನ್ನುವ ಪೀಟರ್ ಟ್ರುಡ್ಗಿಲ್ ಅವರ ಮಾತಿನಲ್ಲಿ ನಿಚ್ಚಳವಾಗಿ ಗೋಚರಿಸುತ್ತದೆ. ಶಿಷ್ಟ ರೂಪಗಳೇ ಸದಾ ಸಾಮಾಜಿಕ ಮನ್ನಣೆಗೆ ಪಾತ್ರವಾಗುತ್ತವೆ ಎಂದೇನೂ ಇಲ್ಲ. ಶಿಷ್ಟರೂಪಗಳನ್ನು ತಿರಸ್ಕರಿಸಿ ದೇಶೀಪದಗಳು ಅನುಮೋದಿಸಿದ ಅನೇಕ ಸಂದರ್ಭಗಳು ಭಾಷಾ ಬಳಕೆಯ ಹಿನ್ನೆಲೆಯಲ್ಲಿ ಕಾಣಸಿಗುತ್ತವೆ. ದೇಶಿ ಚಳುವಳಿ, ದೇಶಿ ಪ್ರಜ್ಞೆ, ಸ್ವಭಾಷಾ ನಿಷ್ಠೆಯಿಂದ ಕೆಲಸ ಮಾಡಿಸಿವೆ. ಇಂಗ್ಲೆಂಡ್‌ನ ಮಾರ್ಥಾಸ್ ವಿನೆಯಾರ್ಡ್ ದ್ವೀಪದಲ್ಲಿ ಜಾಗೃತಗೊಂಡ ಭಾಷಾ ಪ್ರೇಮ ತಮಿಳುನಾಡಿನ ಹಿಂದಿ ಸಂಸ್ಕೃತ ವಿರೋಧಿ ಮನೋಭಾವ ಹಾಗೂ ತಮಿಳು ನಿಷ್ಠೆ, ಜರ್ಮನಿಕ್ ಮಾಸ್ಟರ್ ರೇಸ್ ನಿರ್ಮಾಣ ಮಾಡುವಲ್ಲಿ ಹೆಣಗಿದ ನಾಜಿ ಸಿದ್ಧಾಂತ ಇವೆಲ್ಲ ಈ ಬಗೆಯ ಬೆಳವಣಿಗೆಗೆ ಸಲ್ಲುವ ಪುರಾವೆಗಳು.

ಹೀಗೆ ಸಮಾಜ ಭಾಷೆಯ ಮೇಲೆ ಬೀರುವ ಪ್ರಭಾವವನ್ನು ಸಾದರಪಡಿಸಬಹುದು. ಸಮಾಜದ ಪ್ರಾಕೃತಿಕ ಪರಿಸರ ಭಾಷೆಯಲ್ಲಿ ಬಿಂಬಿತವಾಗಿರುತ್ತದೆ. ಇದಕ್ಕೆ ಎಸ್ಕಿಮೋ ಜನರ Snow vocabulary ಸ್ಕ್ಯಾಂಡಿನೇವಿಯಾದ ಲ್ಯಾಪ್ ಭಾಷೆಗಳ Rein deer vocabulary ಬೆಡೂಯಿನ್ ಅರಾಬಿಕ್‌ನ Camel vocabulary ಯನ್ನು ಹೆಸರಿಸಬಹುದು. ಸಂಬಂಧವಾಚಿ

ಪದಗಳಲ್ಲಿರುವ ಸಾಮಾಜಿಕ ಬಂಧುರತೆಯನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಇನ್ನೂ ಕೆಲವು ಖಿಚಿಛಿಔಔ ತಿಔಡಿಜ ಅಂತೂ ಸಾಮಾಜಿಕ ಮೌಲ್ಯ ಪ್ರತಿಪಾದನೆಯ ಕಂಕಣಬದ್ಧ ಶಾಸನಗಳಂತೆಯೇ ಗೋಚರಿಸುತ್ತವೆ. ಇವುಗಳನ್ನು ಕಡೆಗಣಿಸಿದರೆ ಕೆಲವು ಸಮಾಜಗಳಲ್ಲಿ ನಿಂದನೆ ಬಹಿಷ್ಕಾರ ದಂಡನೆಯಂತಹ ಗುರುತರ ಶಿಕ್ಷೆಗಳನ್ನು ವಿಧಿಸುವುದುಂಟು. ಭಾಷೆ ಸಮಾಜಗಳ ನಡುವೆ ಇರುವ ಇಂತಹ ಅನೇಕ ವಿಸ್ಮಯಕರ ಪ್ರಭಾವ ಪರಿಣಾಮಗಳನ್ನು ಗುರುತಿಸಬಹುದು.

ಸಮಾಜ ಭಾಷೆ ಮೇಲೆ ಬೀರುವ ಪ್ರಭಾವ ಎಷ್ಟು ಘನವಾದದ್ದು, ಭಾಷೆ ಸಮಾಜದ ಮೇಲೆ ಬೀರುವ ಪ್ರಭಾವವೂ ಅಷ್ಟೇ ಪರಿಣಾಮಕಾರಿಯಾದುದು. ಇದಕ್ಕೆ ಸಂಬಂಧಿಸಿದಂತೆ ಹೆಸರಾಂತ ಭಾಷಾ ವಿಜ್ಞಾನಿಗಳಾದ ಸಫೀರ್ ಮತ್ತು ವೋರ್ಫ್‌ದ್ವಯರು ಒಂದು ಸಿದ್ಧಾಂತವನ್ನೇ ಪ್ರಚುರಪಡಿಸಿದ್ದಾರೆ. ಅದು ಭಾಷೆ ಸಮಾಜ ಸಂಸ್ಕೃತಿಯ ವಿವೇಚನೆಯ ಸಂದರ್ಭದಲ್ಲಿ ಖಂಡಿತಾ ನೆನಪಿಸಿಕೊಳ್ಳುವಂತಹದ್ದು. ಅವರ ಪ್ರಕಾರ ಭಾಷೆ ಆಡುಗರ ಪ್ರಾಪಂಚಿಕ ದೃಷ್ಟಿಕೋನವನ್ನು ರೂಢಿಸುತ್ತದೆ ಪ್ರಪಂಚವನ್ನು ಗ್ರಹಿಸುವ ಒಂದು ಚೌಕಟ್ಟನ್ನು ಸಾಧನವನ್ನು ಒದಗಿಸಿ ಕೊಡುತ್ತದೆ. ಅಂದರೆ ಭಾಷೆಯ ವಿಭಿನ್ನ ರೂಪಗಳು ವಿಭಿನ್ನ ಸಾಮಾಜಿಕ ಅನುಭವಗಳನ್ನು ನಿಷ್ಪನ್ನಗೊಳಿಸುತ್ತವೆ. ಹೀಗೆ ಸಮಾಜವನ್ನು ನೋಡುವ ಅರ್ಥೈಸಿಕೊಳ್ಳುವ ಕೀಲಿಕೈ ಭಾಷೆಯಿಂದ ದೊರೆಯುತ್ತದೆ.

ಸಂಸ್ಕೃತಿ ಜಿಜ್ಞಾಸೆ ಕೂಡ ಸುಲಭ ಸಾಧ್ಯವಾದುದಲ್ಲ. ಅದು ಜನರ ಬದುಕಿನ ಜೀವನಾಡಿ. ಅವರ ಭೌತಿಕ ಅಭೌತಿಕ ನೆಲೆಯ ಎಲ್ಲ ಚಟುವಟಿ–ಕೆಗಳನ್ನು ಒಳಗೊಳ್ಳುವಂಥದ್ದು. ಒಂದು ಭಾಷೆಯ ನಿಘಂಟು ಪದಕೋಶಗಳು ಕೊಡುವ ಎಲ್ಲ ವಿವರಗಳು ನೈಜವಾಗಿ ಆ ಭಾಷೆಯನ್ನಾಡುವ ಜನರ ಸಂಸ್ಕೃತಿಯ ಪ್ರತಿಫಲನಗಳೇ ಆಗಿರುತ್ತವೆ. ಕನ್ನಡನಾಡಿನಲ್ಲಂತೂ ಸಂಸ್ಕೃತಿ ಬಗ್ಗೆ ಚಿಂತನೆಯ ಮಹಾಪೂರವೇ ಹರಿದಿದೆ. ಪಾಶ್ಚಾತ್ಯರ Culture ಎಂಬ ಪದಕ್ಕೆ ಸಂವಾದಿಯಾಗಿ ಸಂಸ್ಕೃತಿ ಎಂಬ ಪದ ಸ್ವೀಕರಿಸಲ್ಪಟ್ಟಿದೆ. ಒಂದು ಜನಾಂಗದ ಜೀವನ ವಿಧಾನಕ್ಕೆ ಹಿಡಿದ ಕನ್ನಡಿ ಸಂಸ್ಕೃತಿ ಅವರ ಎಲ್ಲ ಚಟುವಟಿಕೆಗಳ ಒಟ್ಟು ಮೊತ್ತ ಇದು ಎಂದೆಲ್ಲ ಇದನ್ನು ಕುರಿತು ವಿವರಿಸಲಾಗಿದೆ. ಕೆಲವರು ಸಂಸ್ಕೃತಿಯನ್ನು ಒಂದು ಜನಾಂಗದ ಬುದ್ಧಿಶಕ್ತಿ, ವಾಕ್ ಶಕ್ತಿ, ಸಂಘ ಶಕ್ತಿಗಳ ಫಲ ಶ್ರುತಿ ಎಂದು ಪರಿಗಣಿಸಿದರೆ. ಇನ್ನು ಕೆಲವರು ಒಂದು ಜನಾಂಗದ ಸಾಹಿತ್ಯ, ಸಂಗೀತ, ಧರ್ಮ, ತತ್ತ್ವ, ಆಧ್ಯಾತ್ಮ, ಆಚಾರ, ವಿಚಾರ, ಸಂಸ್ಕೃತಿ ಎಂದೂ ಇದರ ಅಧ್ಯಯನವನ್ನು ಸಾಂಸ್ಕೃತಿಕ ಅಧ್ಯಯನ ಎಂದು ಅರ್ಥೈಸಿದ್ದಾರೆ.

ಈ ಅರ್ಥ ಗ್ರಹಿಕೆ ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಕೂಡ ಎದ್ದಿದೆ. ಪರಂಪರೆಯ ಪ್ರತಿಪಾದಕ ಮನೋಭೂಮಿಕೆಯುಳ್ಳ ವಿವೇಕಾನಂದ, ರಾಧಾಕೃಷ್ಣನ್, ಟ್ಯಾಗೋರ್, ಬೇಂದ್ರೆ, ಡಿ.ವಿ.ಜಿ., ದೇವುಡು, ಬೆಟಗೇರಿ, ಕರಮನ್, ಅರ್ನಾಲ್ಡ್, ಮುಂತಾದವರ ಸಂಸ್ಕೃತಿ ವಿಚಾರಧಾರೆ ಏಕಮುಖವಾದುದು ಎಂಬುದು ಇತ್ತೀಚಿನ ದೇಶೀವಾದ, ಸ್ತ್ರೀವಾದ, ವಸಾಹತುವಾದ, ವಿಸ್ಮೃತಿವಾದ ಪ್ರತಿಪಾದಕರು ಎತ್ತಿರುವ ಪ್ರಮುಖ ಆರೋಪ ಅನೇಕ ಜನಾಂಗಗಳ ಬೀಡಾಗಿರುವ ಈ ನಾಡು ಪ್ರತಿಪಾದಿತ ಸಂಸ್ಕೃತಿಯನ್ನು ಈ ಯಾರದೆಂದು ತಿಳಿಯುವುದು. ಆರ್ಯರೆಂದೇ?, ದ್ರಾವಿಡರದೆಂದೇ? ಅಥವಾ ದಲಿತ ಲೋಕದ ಹರಿಜನ ಗಿರಿಜನರದೆಂದೇ? ಒಂದು ಜನಾಂಗದ ಅಧ್ಯಯನ ಅಥವಾ ವಿಶ್ಲೇಷಣ ಸಾಮಗ್ರಿಯನ್ನು ಎಲ್ಲ ಜನಾಂಗಕ್ಕೂ ಅನ್ವಯಿಸಿ ಹೇಳುವುದು ಎಷ್ಟರಮಟ್ಟಿಗೆ ಸರಿ? ಇವರೆಲ್ಲ, ಒಂದೇ ರೀತಿಯಲ್ಲಿ ಬದುಕುತ್ತಿದ್ದಾರೆಯೇ? ಸಮಾನ ಸವಲತ್ತುಗಳು ಪಡೆಯುತ್ತಿದ್ದಾರೆಯೇ? ಇವರೆಲ್ಲರ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಜಗತ್ತು ಒಂದೇ ಬಗೆಯದೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅಷ್ಟು ಸರಳವಾದುದಲ್ಲ. ಏಕೆಂದರೆ ಈವರೆಗೆ ಒಂದು ಪ್ರಧಾನ ಸಂಸ್ಕೃತಿಯ ಅಧ್ಯಯನ ಮಾತ್ರ ನೆರವೇರಿದೆ. ಸಮಾಜದ ನಿರ್ಲಕ್ಷ್ಯಕ್ಕೆ, ಅವಮಾನಕ್ಕೆ, ಹಿಂಸೆಗೆ, ತುಳಿತಕ್ಕೆ ಒಳಗಾಗುತ್ತಾ ಬಂದಿರುವ ಜನರ ಸಂಸ್ಕೃತಿಯ ಅಧ್ಯಯನ ನಡೆದಿಲ್ಲ. ಇವರ ಬದುಕು ಶ್ರಮ, ಆಹಾರ, ಉಡುಗೆ, ತೊಡುಗೆ, ನೋವು, ನಲಿವುಗಳು, ಭಾಷೆ, ಬಣ್ಣಗಳು ಇಂದಿಗೂ ನಿಕೃಷ್ಟವಾಗಿವೆ. ಸಸ್ಯಾಹಾರ, ಮಾಂಸಾಹಾರಗಳ ನಡುವೆ ಶ್ರೇಷ್ಠ ಕನಿಷ್ಠತೆಯ ಕಂದರವನ್ನು ನಿರ್ಮಿಸಲಾಗಿದೆ. ಬಿಳಿ ಕಪ್ಪುಗಳ ವರ್ಣವ್ಯತ್ಯಯ ತಾರತಮ್ಯ ಮೇಲರಿಮೆ ಕೀಳರಿಮೆಗಳ ಸಂಕೇತವಾಗಿದೆ. ಉಪಸಂಸ್ಕೃತಿಯ ಜನರ ಬದುಕು ಪ್ರಧಾನ ಸಂಸ್ಕೃತಿಯ ಜನರ ಕಣ್ಣಿಗೆ ಅಮಾನವೀಯವಾಗಿ ಕಾಣಿಸುತ್ತದೆ. ಹೀಗಿರುವಾಗ ಸಂಸ್ಕೃತಿಯ ಇದುವರೆಗಿನ ಅಧ್ಯಯನಕ್ಕೆ ಏನು ಬೆಲೆ. ಇದನ್ನೇ ಬರಗೂರರ ಉಪಸಂಸ್ಕೃತಿ, ರಹಮತ್ ಅವರ ಪ್ರತಿ ಸಂಸ್ಕೃತಿ, ಡಿ.ಆರ್.ಎನ್. ಅವರ ವಿಸ್ಮೃತಿ ಸಂಸ್ಕೃತಿ, ಹರಿಹರ ಪ್ರಿಯ ಅವರ ಪರ್ಯಾಯ ಸಂಸ್ಕೃತಿ ಮತ್ತು ರಂಗರಾಜ ವನದುರ್ಗ ಅವರ ಪಲ್ಲಟ ಸಂಸ್ಕೃತಿಗಳು. ಕೆದಕಿ ಕೆಣಕಿ ಕೇಳುತ್ತಿರುವುದು ಇದೇ ಬಗೆಯ ಪ್ರಶ್ನೆಗಳು. ಭಾಷೆ ಮತ್ತು ಸಮಾಜಗಳನ್ನು ಕುರಿತಾಗಿಯೂ ಎದುರಾಗುತ್ತವೆ. ಭಾಷೆಯೆಂದರೆ ಯಾವ ಭಾಷೆ? ಯಾವ ಕಾಲದ್ದು? ಯಾವ ಬಗೆಯದ್ದು? ಯಾವ ರೂಪದ್ದೂ? ಯಾವ ಪ್ರದೇಶದ್ದು? ಯಾವ ಜಾತಿ? ವರ್ಗದ್ದೂ?, ಯಾವ ಮಾಧ್ಯಮದ್ದು?. ಇಂಥ ನೂರಾರು ಪ್ರಶ್ನೆಗಳು ಎಡತಾಕುತ್ತವೆ. ಹಾಗೆಯೇ ಸಮಾಜದ ಬಗೆಗೆ ಕೂಡ ಯಾವ ಸಮಾಜ? ಯಾರ ಸಮಾಜ?

ಯಾವ ಕಾಲದ ಸಮಾಜ? ಇತ್ಯಾದಿ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಆಧುನಿಕ ಸಮಾಜ ಪ್ರಸ್ತುತದ ಸಮಾಜ ಎಂದುಕೊಂಡರೂ ಅದರ ವ್ಯಾಪ್ತಿಯನ್ನು ಒಂದು ಮಿತಿಯಲ್ಲಿಯೇ ವಿಶ್ಲೇಷಿಸಬೇಕಾಗುತ್ತದೆ.

ಒಟ್ಟಿನಲ್ಲಿ ಭಾಷೆ, ಸಮಾಜ ಮತ್ತು ಸಂಸ್ಕೃತಿ ಇವನ್ನು ಒಂದು ನಿರ್ವಾತದಲ್ಲಿಟ್ಟು ಅಧ್ಯಯನ ಮಾಡುವುದು ಸಾಧ್ಯವಿಲ್ಲ. ಇವು ಮೂರೂ ಒಂದರೊಡನೊಂದು ಅವಿನಾಭಾವ ಸಂಬಂಧಿಯಾಗಿ ಹೆಣೆದುಕೊಂಡಿವೆ. ಒಂದನ್ನುಳಿದು ಇನ್ನೊಂದಕ್ಕೆ ಅಸ್ತಿತ್ವ ಪ್ರಾಪ್ತವಾಗುವುದಿಲ್ಲ. ಒಂದನ್ನು ಬಿಟ್ಟು ಇನ್ನೊಂದನ್ನು ಪರಿಗಣಿಸಲು ಬರುವುದಿಲ್ಲ. ಆದುದರಿಂದ ಭಾಷೆ ಪ್ರತ್ಯೇಕವಾಗಿ ಅಧ್ಯಾಯನ ಮಾಡಲಾಗುವುದಿಲ್ಲ. ಹಾಗೇ ಸಮಾಜ ಮತ್ತು ಸಂಸ್ಕೃತಿ ಕೂಡ.

**ಪರಾಮರ್ಶನ ಗ್ರಂಥಗಳು:**


1. ಭಾಷಾ ವಿಜ್ಞಾನದ ಮೂಲ ತತ್ವಗಳು (2013), ಡಾ. ಎಂ. ಚಿದಾನಂದಮೂರ್ತಿ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.
2. ಭಾಷಾ ವಿಜ್ಞಾನ ಪರಿಚಯ (2000), ಡಾ. ಕೆ. ಕೆಂಪೇಗೌಡ, ನವಭಾರತೀ ಪ್ರಕಾಶನ, ಮೈಸೂರು.
3. ಕನ್ನಡ ಭಾಷಾ ಚರಿತ್ರೆ (1993), ಡಾ. ಕೆ. ಕೆಂಪೇಗೌಡ, ನವಭಾರತೀ ಪ್ರಕಾಶನ, ಮೈಸೂರು.
4. ಭಾರತೀಯ ಭಾಷೆ ಮತ್ತು ಸಾಹಿತ್ಯ (1997), ಡಾ. ಕೆ. ಕೆಂಪೇಗೌಡ, ನವಭಾರತೀ ಪ್ರಕಾಶನ, ಮೈಸೂರು.
5. ಕನ್ನಡ: ರಚನಾತ್ಮಕ ಮತ್ತು ಸಮಾಜೋಭಾಷಿಕ ಅಧ್ಯಯನ (2008), ಡಾ. ಬ. ಸೋ. ಗೊರವರ, ಲಡಾಯಿ ಪ್ರಕಾಶನ, ಗದಗ.